ಅನುದಾನವನ್ನು ತಕ್ಷಣ ದುರಸ್ತಿ ಆಗಬೇಕಾದ ಹಾಗೂ ಅರ್ಧಕ್ಕೆ ಕೆಲಸ ನಿಲ್ಲಿಸಿರುವಂತಹ ದೇವಸ್ಥಾನಗಳ ಅವಶ್ಯಕತೆಯನ್ನು ಆರಿತು ಅಂತಹ ದೇವಸ್ಥಾನಗಳಿಗೆ ಪರ್ಯಾಯಿಸಿದೆ.

ಉಡುಪಿ ತಾಲ್ಲೂಕಿನ ಚಾಂತಾರು ಪ್ರದೇಶದಲ್ಲಿ ಎನ್‌ಟಿಪಿಸಿಯವರು ವಿದ್ಯುತ್ ಸ್ಥಾವರದ ಸ್ಥಾಪನೆ ಮಾಡುವ ಪ್ರಸ್ತಾವನೆ ಮಾಡಿರುವುದು.

3040(1823)

ಶ್ರೀ ಜಯಪ್ರಕಾಶ್ ಹೆಗಡೆ ಕೆ.ಬ್ರಹ್ಮಾವರ: ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಚಾಂತಾರು ಪ್ರದೇಶದಲ್ಲಿ ಎನ್‌ಟಿಪಿಸಿಯವರು ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಯೋಜಿಸಿದ್ದಾರೆ ಎನ್ನುವುದು ನಿಜವೇ? ನಿಜವಾಗಿದ್ದಲ್ಲಿ ಅದರ ವಿವರಗಳೇನು?

ಆ) ಪತ್ರಿಕೆಗಳಲ್ಲಿ ಪ್ರಚಾರವಾದ ಸುದ್ದಿಗಳಂತೆ ಅಲ್ಲಿನ ಸಾರ್ವಜನಿಕರು ವ್ಯಕ್ತಪಡಿಸುತ್ತಿರುವ ವಿರೋಧ ಅಭಿಪ್ರಾಯಗಳ ಬಗ್ಗೆ ಸರಕಾರದ ನಿಲುವು ಏನು?

ಇ) ವಿದ್ಯುತ್ ಸ್ಥಾವರಕ್ಕಾಗಿ ಸರಕಾರದ ವತಿಯಿಂದ ಖಾಸಗಿ ಸಂಸ್ಥೆಯವರಿಂದ ಜಮೀನು ತಪಾಸಣೆ ಕಾರ್ಯವು ನಡೆದಿರುವುದು ನಿಜವಲ್ಲವೆ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ವೀರಕುಮಾರ್ ಆ.ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಉಡುಪಿ ತಾಲ್ಲೂಕು ಚಾಂತಾರು ಪ್ರದೇಶದಲ್ಲಿ ಎನ್‌ಟಿಪಿಸಿ ಸಂಸ್ಥೆಯು ಸ್ಥಾಪಿಸಲು ಉದ್ದೇಶಿಸಿರುವ ವಿದ್ಯುತ್ ಸ್ಥಾವರದ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ.

ಆ) ಪತ್ರಿಕೆಗಳಲ್ಲಿ ಪ್ರಚಾರವಾದ ಸುದ್ದಿಗಳಂತೆ ಅಲ್ಲಿನ ಸಾರ್ವಜನಿಕರು ವ್ಯಕ್ತಪಡಿಸುತ್ತಿರುವ ವಿರೋಧ ಅಭಿಪ್ರಾಯಗಳ ಬಗ್ಗೆ ಸರಕಾರ ಸೂಕ್ತ ಕ್ರಮ ಕೈಗೊಳ್ಳುವುದು.

ಇ) ವಿದ್ಯುತ್ ಸ್ಥಾವರಕ್ಕಾಗಿ ಸರಕಾರದ ವತಿಯಿಂದ ಖಾಸಗಿ ಸಂಸ್ಥೆಯವರಿಂದ

ಜಮೀನು ತಪಾಸಣೆ ಕಾರ್ಯವು ನಡೆದಿರುವುದಿಲ್ಲ.

ರಾಜ್ಯದ ಐ.ಪಿ.ಎಸ್. ಅಧಿಕಾರಿಗಳ ಮೇಲೆ ಲೋಕ ಆಯುಕ್ತರು ದಾಖಲೆ ಮಾಡಿರುವ ಕೇಸುಗಳು.

3041(3495)

ಶ್ರೀ ಕರಿಯಣ್ಣ (ಹೊಳೆಹೊನ್ನೂರು): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಎಷ್ಟು ಜನ ಐ.ಪಿ.ಎಸ್. ಅಧಿಕಾರಿಗಳ ಮೇಲೆ ಲೋಕಾಯುಕ್ತರ ಕೇಸುಗಳು ಇವೆ? ಹೆಸರುಗಳೂಂದಿಗೆ ತಿಳಿಸುವುದು?

ಆ. ಇವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಇ. ಇಲ್ಲದಿದ್ದಲ್ಲಿ ಇವರ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ. ಕೇಸುಗಳ ಸಂಖ್ಯೆ: 1, ಅಧಿಕಾರಿಯ ಹೆಸರು : ಶ್ರೀ ಕಂಪಯ್ಯ

ಆ. ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.

ಇ. ಲೋಕಾಯುಕ್ತದವರಿಂದ ಅಂತಿಮ ತನಿಖಾ ವರದಿ ಸರ್ಕಾರಕ್ಕೆ ಬಂದಿರುವುದಿಲ್ಲ. ಆದುದರಿಂದ ಈ ಹಂತದಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಭದ್ರ ಬಲದಂಡೆ ಆಧುನೀಕರಣದ ಬಗ್ಗೆ ಸರ್ಕಾರದ ಕ್ರಮ.

3042(3496)

ಶ್ರೀ ಕರಿಯಣ್ಣ(ಹೊಳೆಹೊನ್ನೂರು): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ. ಭದ್ರಾ ಬಲದಂಡೆ ಮತ್ತು ಎಡದಂಡೆ ನಾಲೆಗಳನ್ನು ಆಧುನೀಕರಣ ಮಾಡುವ